# ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1443
ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 23-09-2021

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ | 2020-21 ಮತ್ತು 2021-22ನೇ ಸಾಲಿನಲ್ಲಿ ಇದುವರೆಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಜಾಹೀರಾತು ಪ್ರಚಾರ ಫಲಕಗಳ (Display Advertisement through Hoardings) ಮೂಲಕ ನೀಡಿರುವ ಜಾಹೀರಾತುಗಳು ಎಷ್ಟು; ಯಾವ ಏಜೆನ್ಸಿಗಳಿಗೆ ನೀಡಲಾಗಿದೆ; ಅವುಗಳ ಒಟ್ಟು ಅಂದಾಜು ವೆಚ್ಚ ಎಷ್ಟು? | 2020-21 ಮತ್ತು 2021-22ನೇ ಸಾಲಿನಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಜಾಹೀರಾತು ಪ್ರಚಾರ ಫಲಕಗಳ (Display Advertisement through Hoardings) ಮೂಲಕ ನೀಡಿರುವ ಜಾಹೀರಾತು ವಿವರಗಳು:<br>**2020-21ನೇ ಸಾಲಿನಲ್ಲಿ**<br>1) ನೀಡಿರುವ ಜಾಹೀರಾತುಗಳು – ನಾಲ್ಕು<br>2) ಏಜೆನ್ಸಿ (ಅನುಷ್ಠಾನಗೊಳಿಸಿದ ಸಂಸ್ಥೆ) – ರಾಜ್ಯ ಸರ್ಕಾರಿ ಸ್ವಾಮ್ಯದ ಮೆ: ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು.<br>3) ಒಟ್ಟು ವೆಚ್ಚ – ಇಲಾಖಾ ಪ್ರಚಾರ ಫಲಕಗಳ ಮೂಲಕ ಪ್ರಚಾರಕ್ಕೆ ರೂ. 6,01,45,500/- (ಅನ್ವಯವಾಗುವ ತೆರಿಗೆ ಪ್ರತ್ಯೇಕ)<br>4) ಖಾಸಗಿ ಪ್ರಚಾರ ಫಲಕಗಳ ಮೂಲಕ ಪ್ರಚಾರಕ್ಕೆ ರೂ. 4,93,50,000/- (ಅನ್ವಯ ವಾಗುವ ತೆರಿಗೆ ಪ್ರತ್ಯೇಕ)<br>**2021-22ನೇ ಸಾಲಿನಲ್ಲಿ**<br>1) ನೀಡಿರುವ ಜಾಹೀರಾತುಗಳು – ಎರಡು<br>2) ಏಜೆನ್ಸಿ (ಅನುಷ್ಠಾನಗೊಳಿಸಿದ ಸಂಸ್ಥೆ) - ರಾಜ್ಯ ಸರ್ಕಾರಿ ಸ್ವಾಮ್ಯದ ಮೆ: ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು<br>3) ಒಟ್ಟು ವೆಚ್ಚ – ರೂ.1,92,07,658/- (ಅನ್ವಯ ವಾಗುವ ತೆರಿಗೆ ಪ್ರತ್ಯೇಕ) |

| | | |
|---|---|---|
| ಆ | 2021-22 ರಲ್ಲಿ Display Advertisements through Hoardings ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೇಲೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸ್ ಗಳು ದಾಖಲಾಗಿವೆಯೇ; ಏಕೆ ದಾಖಲಾಗಿದೆ? (ವಿವರ ನೀಡುವುದು) | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿ ದಾಖಲಾಗಿದೆ.<br>ಮಿಷನ್ ಬೆಂಗಳೂರು – 2022 ಕಾರ್ಯಕ್ರಮದ ಕುರಿತು ಬೆಂಗಳೂರು ನಗರದ ಹೊರ ವಲಯದ ಪ್ರಮುಖ ಸ್ಥಳಗಳಲ್ಲಿ ಲಭ್ಯವಿರುವ ವಿವಿಧ ಅಳತೆಯ ಪ್ರಚಾರ ಫಲಕಗಳಲ್ಲಿ ಪ್ರಚಾರ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಜಿ) ರಡಿ ಹೊರಡಿಸಲಾದ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ 18 ವೆಚ್ಚ-12/2021, ದಿನಾಂಕ:24/02/2021 ಕ್ಕೆ ತಡೆಯಾಜ್ಞೆ ನೀಡಲು ಹಾಗೂ ಕಾರ್ಯಕ್ರಮದ ಅನುಷ್ಠಾನವನ್ನು KTPP ನಿಯಮಗಳ ರೀತ್ಯಾ ಟೆಂಡರ್ ಕರೆದು ಅನುಷ್ಠಾನಗೊಳಿಸಲು Writ of Certiorari ಹಾಗೂ Writ of Mandamus ಆದೇಶ ಹೊರಡಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೆ:ಸಂಜಯ್ ಮಾರ್ಕೆಟಿಂಗ್ & ಪಬ್ಲಿಸಿಟಿ ಸರ್ವಿಸಸ್, ಬೆಂಗಳೂರು ಇವರು ರಿಟ್ ಅರ್ಜಿ ಸಂಖ್ಯೆ: 8994/2021ನ್ನು ದಾಖಲಿಸಿರುತ್ತಾರೆ. |

ಕಸಿಇ-ಪಿಐಪಿ/259/2021

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ